**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

**MVC No. 242/2022**

**ಸಾಕ್ಷಿಯನ್ನು ದಿಃ 20.02.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಅರ್ಜಿಯ ಮೇಲಿನ ಆದೇಶದಂತೆ** ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ ಬಿ.ಜಿ.ಕೆ ಪರ ಶ್ರೀಮತಿ.ಡಿ.ಎಸ್.ವಿ ವಕೀಲರಿಂದಃ-

ಅಪಘಾತದ ಸಮಯದಲ್ಲಿ ಮುಂಜಾನೆಯಾಗಿದ್ದರಿಂದ ಕತ್ತಲೆ ಇತ್ತು ಎಂದರೆ ಸರಿ. ನಾವು ಹೋಗುತ್ತಿದ್ದ ರಸ್ತೆಯಲ್ಲಿ ಪುಟ್ ಪಾತ್ ಇತ್ತು. ಅಪಘಾತ ಪಡಿಸಿದ ವಾಹನದ ಸಂಖ್ಯೆ KA-12-A-8311 ರ ಲಾರಿ. ಸದರಿ ಲಾರಿ ರಸ್ತೆಯ ಎಡಗಡೆ ನಿಂತಿತ್ತು ಎಂದರೆ ಚಲಿಸುತ್ತಿತ್ತು. ನಾನು ಬಸ್ಸನ್ನು 30-40 ಕಿ.ಮೀಟರ್ ವೇಗದಲ್ಲಿ ಚಲಾಯಿಸುತ್ತಿದ್ದೆ. ಅಷ್ಟು ವೇಗದಲ್ಲಿ ಓಡಿಸುತ್ತಿದ್ದರೆ ಅಪಘಾತವಾಗುತ್ತಿರಲಿಲ್ಲ, ವೇಗವಾಗಿ ಚಲಾಯಿಸಿದ್ದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನಗೆ ರಸ್ತೆ ಸರಿಯಾಗಿ ಕಾಣಿಸದೇ ಇದ್ದ ಕಾರಣ ಸ್ವತಃ ಲಾರಿಗೆ ಡಿಕ್ಕಿಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನಿಧಾನವಾಗಿ ಬಸ್ಸನ್ನು ಚಲಾಯಿಸಿದ್ದರೇ ಅಪಘಾತ ತಪ್ಪಿಸಬಹುದಿತ್ತು ಎಂದರೆ ಸರಿಯಲ್ಲ. ಅಪಘಾತದ ದಿನ ನಿರ್ವಾಹಕರು ಎಡಭಾಗದಲ್ಲಿ ಕುಳಿತಿದ್ದರು. ಅಪಘಾತವು ರಸ್ತೆಯ ಎಡಭಾಗದ ಅಂಚಿನಲ್ಲಿ ಆಗಿದೆ ಎಂದರೆ ಸರಿಯಲ್ಲ. ಅಪಘಾತದಿಂದಾಗಿ ನನ್ನ ಎಡಕಾಲು, ಎರಡು ಕೈಗಳು ಮತ್ತು ಮುಖಕ್ಕೆ ಏಟಾಯಿತು. ನನಗೆ ಶಸ್ತ್ರ ಚಿಕಿತ್ಸೆ ಆಗಿದೆ. ನನ್ನ ವಯಸಿಸನ ಬಗ್ಗೆ ಆಧಾರ್ ಕಾರ್ಡ್ ಕೊಟ್ಟಿದ್ದೇನೆ. ಅಪಘಾತದ ನಂತರ ಆ್ಯಂಬುಲೆನ್ಸ್‌ಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಮೊದಲು ಯಾವ ಆಸ್ಪತ್ರೆಗೆ ಎಂದರೆ ಪ್ರಜ್ಞೆ ಇರಲಿಲ್ಲ. ನಂತರ Clearmedy rediant ಆಸ್ಪತ್ರೆಗೆ ಹೋಗಿ ದಾಖಲಾಗಿದ್ದೇನೆ. ಮೊದಲು ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಿರಿ ಎಂದು ತಿಳಿದುಕೊಂಡಿದ್ದಿರಾ ಇಲ್ಲವೇ ಎಂದರೆ ತಿಳಿದುಕೊಂಡಿದ್ದೇನೆ. ಅಪಘಾತ ಹೇಗಾಯಿತು, ಗಾಯ ಹೇಗಾಯಿತು ಎಂದು ಆಸ್ಪತ್ರೆಯಲ್ಲಿ ನಾನು ಹೇಳಿ ಬರೆಸಿಲ್ಲ. ಡಿಪೋ ಮ್ಯಾನೇಜರ್ ದೂರು ಕೊಟ್ಟಿದ್ದಾರೆ. ಡಿಪೋ ಮ್ಯಾನೇಜರ್ ಅಪಘಾತ ನೋಡಿಲ್ಲ ಎಂದರೆ ಸರಿ. ನನಗೆ ಡಾ.ಜಗದೀಶ್ ಚಿಕಿತ್ಸೆ ನೀಡಿದ್ದಾರೆ. ನನ್ನ ನಿರ್ಲಕ್ಷ್ಯತನದಿಂದ ಅಪಘಾತವಾಗಿದೆ ಎಂದು ಕೆಲಸದಿಂದ ನನ್ನನ್ನು ವಜಾ ಮಾಡಿಲ್ಲ. ಈಗ ನಾನು ಚಾಲಕನಾಗಿ ಕೆಲಸ ಮಾಡುತ್ತಿಲ್ಲ. ಈಗ ನಾನು ಕೆ.ಎಸ್.ಆರ್.ಟಿ.ಸಿ. ಯಲ್ಲಿ ಅಟೆಂಡರ್ ಕೆಲಸ ಮಾಡುತ್ತೇನೆ. ಅಪಘಾತಕ್ಕೂ ಮೊದಲುರೂ.30 ರಿಂದ 35 ಸಾವಿರ ಸಂಬಳ

ಬರುತ್ತಿತ್ತು. ಈಗ ಎಷ್ಟು ಸಂಬಳ ಬರುತ್ತದೆ ಎಂದರೆ ಸಂಬಳದಲ್ಲಿ ಈಗ ಸಂಬಳದಲ್ಲಿ ವ್ಯತ್ಯಾಸವಾಗಿಲ್ಲ, ಆದರೆ ಪ್ರತಿ 3 ತಿಂಗಳಿಗೊಮ್ಮೆ ವೈದ್ಯರ ಪ್ರಮಾಣಪತ್ರ ಹಾಜರುಪಡಿಸಬೇಕಾಗಿದೆ. ನನ್ನ ಸಂಬಳ SBI ಬ್ಯಾಂಕ್ ಗೆ ಜಮಾ ಆಗುತ್ತದೆ. ಸಂಬಳಕ್ಕೆ ಸಂಬಂಧಿಸಿದಂತೆ ಬ್ಯಾಂಕ್ Statement ಹಾಜರುಪಡಿಸಲು ತೊಂದರೆ ಇಲ್ಲ. ನಾನು ಕೆಲಸದಲ್ಲಿ ಮುಂದುವರಿದಿರುವುದರಿಂದ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಸರ್ಕಾರಿ ನೌಕರನಾಗಿರುವ ಕಾರಣ ESI ಸೌಲಭ್ಯ ಪಡೆದುಕೊಂಡಿದ್ದೇನೆ ಎಂದರೆ ಇಲ್ಲ. ನನ್ನ ನಿರ್ಲಕ್ಷ್ಯತನದಿಂದಲೇ ಸ್ವತಃ ಲಾರಿಯ ಹಿಂಭಾಗಕ್ಕೆ ಡಿಕ್ಕಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ಸಂಪೂರ್ಣವಾಗಿ ನನ್ನ ನಿರ್ಲಕ್ಷ್ಯತದಿಂದಲೇ ಆಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.